ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 88-94
©*IIMRD*, Mysuru
IIMRD JOURNALS
www.iimrd.com

# ನಾಗ ಸಾಧು ಮತ್ತು ಅಘೋರಿಗಳ ಬದುಕು

ಪ್ರವೀಣ ಕುಮಾರ ಬಿ.[1]

**ಪೀಠಿಕೆ**

ಭಾರತವು ವೈವಿಧ್ಯಮಯ ಸಂಸ್ಕೃತಿ ಮತ್ತು ಪ್ರಕೃತಿಯನ್ನು ಹೊಂದಿರುವ ರಾಷ್ಟ್ರವಾಗಿದೆ. ಇಲ್ಲಿ ವಿಭಿನ್ನ ಧರ್ಮ, ಜಾತಿ, ಸಮುದಾಯಗಳು ಅಸ್ತಿತ್ವದಲ್ಲಿರುವಂತೆ ವಿಭಿನ್ನ ಆಚಾರ ವಿಚಾರ, ರೂಢಿ ಸಂಪ್ರದಾಯಗಳು ಕಂಡು ಬರುತ್ತದೆ. ಸಾಧನೆಯ ಸಾಧಿಸುವ ಛಲ ಕ್ರಿಯಾತ್ಮಕವಾದ ರೂಪ ಹೊಂದಿದ್ದರೆ, ದೇವರ ಸ್ಮರಣೆಯ ಪ್ರಕಾರಗಳು ಮತ್ತು ಸಂಸ್ಕೃತಿಯ ಸಂಪ್ರದಾಯದ ಆಚರಣೆಗಳ ಕ್ರಮ ಏಕರೂಪದ ವೈವಿದ್ಯತೆಯನ್ನು ಹೊಂದಿದೆ ಎಂದು ತಿಳಿಯಲ್ಪಡುತ್ತದೆ ಮತ್ತು ನಾಗ ಸಾಧುಗಳು ಮತ್ತು ಸನ್ಯಾಸಿಗಳು ಶಿವ ತತ್ವದ ಸ್ವರೂಪದ ಆಧಾರದ ಮೇಲೆ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಹಾಗಾದರೆ ಈ ನಾಗ ಸಾಧುಗಳು ಯಾರು? ಇವರ ಜೀವನಕ್ರಮ, ಆಚರಣೆ, ಉಡುಗೆ–ತೊಡುಗೆ, ಇವರ ಹಿನ್ನಲೆ ಮುಂತಾದವುಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ನಾಗ ಸಾಧುಗಳ ಹಿನ್ನಲೆ ಮತ್ತು ಜೀವನ**

ನಾಗ ಸಾಧುಗಳನ್ನು 8ನೇ ಶತಮಾನದ ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಅನುಯಾಯಿಗಳು ಎಂದು ಕರೆಯುತ್ತಾರೆ. ಅನಾದಿ ಕಾಲದಿಂದಲೂ ಧರ್ಮ ಮತ್ತು ಯುದ್ಧಗಳ ಕಟ್ಟಳೆಗಳಲ್ಲಿ ಹುಟ್ಟಿದಂತಹ ಪಂಥ ಎಂದು ಕೂಡ ಕರೆಯುತ್ತಾರೆ. ಇವರು ದತ್ತಾತ್ರೇಯರವರ ಶಿಷ್ಯರು ಎಂದು ಕೂಡ ಹೇಳಲಾಗುತ್ತದೆ. ಆದರೆ ಇದಕ್ಕೆ ಯಾವ ನಿದರ್ಶನಗಳು ಕೂಡ ಇಲ್ಲ. ಆದರೆ ಶ್ರೇಷ್ಠತೆಯನ್ನು ಮೆರೆದ ಸಮುದಾಯ ಎಂಬುದನ್ನು ಕಂಡುಕೊಳ್ಳಬೇಕಾಗುತ್ತದೆ. ಮತ್ತೊಂದು ಸಂಗತಿ ಅಂದರೆ ಕಾಳಮುಖ ಮತ್ತು ಕಾಪಾಲಿಕ ಸಮುದಾಯಕ್ಕೆ ಸೇರಿದ್ದಾರೆಂಬುದನ್ನು ಕೆಲವು ಅಧ್ಯಯನಕಾರರು ತಿಳಿಸಿದ್ದಾರೆ. “ಕಾಪಾಲಿಕರು ಭೈರವ ರೂಪಿಯಾದ ಶಿವನನ್ನು ಆರಾಧಿಸುತ್ತಿದ್ದರು. ತಲೆಬುರುಡೆಯೊಂದನ್ನು ಕೈಯಲ್ಲಿ ಹಿಡಿದಿಡುತ್ತಿದ್ದರು. ಮೂಳೆಯನ್ನು ಹಾರವನ್ನಾಗಿ ಧರಿಸುತ್ತಿದ್ದರು. ಜಟೆ ಬಿಟ್ಟಿರುತ್ತಿದ್ದರು. ತ್ರಿಶೂಲ, ಡಮರುಗ, ಖಡ್ಗ ಹಿಡಿದಿರುತ್ತಿದ್ದರು. ಕರ್ಣಕುಂಡಲ, ಜನಿವಾರ ಇರುತ್ತಿತ್ತು. ಸ್ಮಶಾನದ ಬೂದಿಯಿಂದ ಭಸ್ಮ ಸ್ನಾನ ಮಾಡುತ್ತಿದ್ದರು. ಲೋಕದ ನಶ್ವರತೆಯನ್ನು ಸೂಚಿಸುವ ಈ ಬೂದಿ ತೀವ್ರವಾಗಿ ಬದುಕನ್ನು ಪ್ರೇರೇಪಿಸುತ್ತದೆ ಎಂದು ಭಾವಿಸಿದ್ದರು”. (ರಹಮತ್ ತರಿಕೇರೆ, 2013) ಹೀಗೆ ಇವರ ಎಲ್ಲಾ ವರ್ತನೆಯನ್ನು ಕಾಪಾಲಿಕ ಮತ್ತು ಕಾಳಮುಖ ಪಂಥಕ್ಕೆ ಅನ್ವಯಿಸುತ್ತದೆ ಎಂದು ವಿದ್ವಾಂಸರು ಹೇಳಿರುವುದನ್ನು ನೋಡಬಹುದು. ಹೀಗೆ ಅವರು ಸೇವಿಸುವ ಭಂಗಿಗಳು ಅವರ ಸಾಧನೆಯನ್ನು ತೋರುತ್ತದೆ ಎಂದು ಹೇಳುತ್ತಾರೆ. “ಯಾವುದೇ ಗುರು ಬೋಧನಾ ಪದ್ಧತಿಯುಳ್ಳ ಸಿದ್ಧ ಮತ್ತು ಆರೋಢ

[1] *ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.*

ಸಂಪ್ರದಾಯಗಳನ್ನು ಭಂಗಿ ಇಲ್ಲದೇ ಕಲ್ಪಿಸಿಕೊಳ್ಳುವುದು ಕಷ್ಟ. ಮಧ್ಯ ಹಾಗೂ ಭಂಗಿಗಳು ಸಾಧಕರಿಗೆ ಮಾನಸಿಕವಾದ ಉಮ್ಮಸ್ಸಿನ ಅವ್ಯವಸ್ಥೆಯನ್ನು ಪಡೆಯಲು ಪ್ರಚೋದಕಗಳಾಗಿ ಕೆಲಸ ಮಾಡುತ್ತವೆ. ಯೋಗ ಸಾಧನೆಯಲ್ಲಿ ಈ ಸ್ಥಿತಿಗೆ ಹೋಗಲು ನೆರವಾಗಲಿ ಎಂದು ಇವುಗಳ ಸೇವನೆ ಪ್ರಾರಂಭವಾಗಿರಬಹುದು. ಆದರೆ ಇದು ಮೌನಿಕ ಚಟುವಟಿಕೆಗೆ ಇಲ್ಲವೇ ಕೇವಲ ಚಟವಾಗಿ ಹೋದ ನಿದರ್ಶನಗಳೇ ಹೆಚ್ಚು" (ರಹಮತ್ ತರಿಕೆರೆ, 2013) ಎಂಬುದಾಗಿ ಬರೆದಿದ್ದಾರೆ. ಇದರಲ್ಲಿ ನಾಗ ಸಾಧುಗಳು ಹೆಚ್ಚಾಗಿ ಭಂಗಿ ಸೇವನೆ ಮಾಡುತ್ತಾರೆ. ಅದು ಅವರ ದೇವರ ಅನುಸಂಧಾನಕ್ಕೆ ನೆರವಾಗುತ್ತದೆ ಎಂದು ಹೇಳುತ್ತಾರೆ. ಅದರಂತೆ ಕೆಲವರಿಗೆ ಇದು ಹವ್ಯಾಸವಾಗಿ ಪರಿವರ್ತನೆಯಾಗಿರಬಹುದು ಎಂದು ಕಂಡು ಬರುತ್ತದೆ. ಅನೇಕ ಯೋಗಿಗಳು ಕೇವಲ ಭಂಗಿಯಿಂದಲೇ ಮದಸಂತರಾಗಿರುತ್ತಾರೆ. ಅವರು ಅದಕ್ಕೆ ಹೊಂದಿಕೊಂಡಿರುತ್ತಾರೆ. ಅದರಂತೆ ರಾಯಚೂರಿನಲ್ಲಿ ನಡೆಯುವ ಸಾಧುಗಳ ಭಂಗಿ ಜಾತ್ರೆಯಲ್ಲಿ ಅನೇಕ ನಾಗ ಸಾಧುಗಳು, ಸಿದ್ಧರು ಹೀಗೆ ಸಿದ್ಧ ಪರಂಪರೆ ಸೇರಿ ಭಂಗಿ ಸೇವನೆ ಮಾಡುವುದು ಕಂಡು ಬರುತ್ತದೆ.

ಇವರು ಎಲ್ಲರೂ ಶೈವ ಪಂಥದ ಶಿವನ ಹರಿಕಾರದವರು. ಇವರಿಗೆ ಶಿವಸ್ಮರಣೆಯಿಂದಲೇ ವೈಭವದ ದಾರಿ ಗೋಚರಿಸುತ್ತದೆ ಎಂದು ಭಾವಿಸುವರು ಎಂದು ಅರಿಯಬಹುದಾಗಿದೆ. ಕೆಲವು ಹೇಳಲು ಆಗದಂತಹ ಪದ್ಧತಿಗಳಲ್ಲಿ ಶ್ರೇಷ್ಠತೆಯನ್ನು ಮೆರೆದ ಪಂಥ ಎಂದು ಭಾವಿಸಬಹುದಾಗಿದೆ. ಅದರಂತೆ ಸುಡುಗಾಡು ಸಿದ್ಧರ ಸಮುದಾಯ ಹಾಗೂ ನಾಗಸಾಧುಗಳ ದಾರಿಯನ್ನು ಸ್ವಲ್ಪ ಮಟ್ಟಿಗೆ ತುಳಿದಿರಬಹುದು ಎಂದು ಭಾವಿಸಬಹುದು. ನಾಗಸಾಧುಗಳ ಆಚರಣೆಗೂ, ಸಿದ್ಧರ ಕಾಯಕದ ಆಚರಣೆಗೂ ಬಹಳ ವ್ಯತ್ಯಾಸ ಕಂಡು ಬರುವುದಿಲ್ಲ ಎಂಬುದಾಗಿ ನೋಡಬಹುದು.

ಕೆಲವು ಪದ್ಧತಿಗಳನ್ನು ನಾಗ ಸಾಧುಗಳು ಬಹಳ ಘೋರವಾಗಿ ಮಾಡುವುದನ್ನು ಬಿಟ್ಟರೆ ಉಳಿದ ಕೆಲವು ಪದ್ಧತಿಯು ಅವರ ನೆರಳಿನಲ್ಲಿ ನಡೆದಿದ್ದಾರೆಂದು ಕಂಡು ಬರುತ್ತದೆ. ಇವರು ಶೈವ ಪಂಥದ ಶಿವ ಆರಾಧನೆಯಲ್ಲಿ ಕಂಡು ಬರುತ್ತಾರೆ. ಹಾಗೆ ಅನೇಕ ಯೋಗಿ ಸಾಧು ಸಂತರು ಎಲ್ಲರೂ ಕಾಳಮುಖ, ಕಾಪಾಲಿಕ ಪಂಥಕ್ಕೆ ಹೊಂದಿದವರು ಎಂದು ತಿಳಿಯುತ್ತದೆ. ಉದಾಹರಣೆಗೆ ಸುಡುಗಾಡು ಸಿದ್ಧರು ಈ ಪಂಥಕ್ಕೆ ಸೇರಿದ್ದಾರೆ ಎಂಬುದಕ್ಕೆ ಅವರ ಆಚರಣೆ ಕೆಲವು ಪದ್ಧತಿಗಳನ್ನು ಗಮನಿಸಿದಾಗ ಕೆಲವು ವಿದ್ವಾಂಸರು ಹೀಗೆ ಉಲ್ಲೇಖಿಸಿದ್ದಾರೆ. "ಸುಡುಗಾಡು ಸಿದ್ಧರು ಕೈಚಳಕ ತೋರಿಸುವಲ್ಲಿ ಸಿದ್ಧಹಸ್ತರು. ಈ ವೃತ್ತಿಗಾಗಿ ಇವರು ಗ್ರಾಮಗಳ ಮನೆ ಮನೆಗೆ ಪಾರಂಪರಿಕವಾಗಿ ಅಲೆಯುವರು. ವಿಶಿಷ್ಟವಾದ ವೇಷ ಭೂಷಣಗಳನ್ನು ತೊಟ್ಟು ಕೈಚಳಕದ ವಿದ್ಯೆಯನ್ನು ಪ್ರದರ್ಶಿಸುತ್ತಾ ಭಿಕ್ಷಾಟನೆ ಮಾಡಿ ಜೀವನ ಸಾಗಿಸುವ ಈ ಸಮುದಾಯ ಜನಸಾಮಾನ್ಯರಿಗೆ ಆಕರ್ಷಣೆ ಅತಿಮಾನುಷ ವ್ಯಕ್ತಿಗಳಾಗಿ ಕಂಡು ಬರುತ್ತದೆ. ಶೈವ, ಕಾಳಮುಖ, ಕಾಪಾಲಿಕ ಪಂಥಗಳ ಪಳೆಯುಳಿಕೆಯಂತೆ ಕಂಡು ಬರುವುದು". (ಮೇತ್ರಿ ಕೆ.ಎಂ, 2012) ಹೀಗೆ ಸಿದ್ಧರು ಕೂಡ ಇವರ ನೆರಳಿನಲ್ಲಿ ನಡೆದಿರಬಹುದು ಎಂದು ಭಾವಿಸಬಹುದು.

ನಾಗ ಸಾಧುಗಳು ಮತ್ತು ಕೆಲವು ಸಿದ್ಧಸಂತರು ಹಾಗೂ ಸುಡುಗಾಡು ಸಿದ್ಧರ ಆಚರಣೆಗೂ ವ್ಯತ್ಯಾಸ ಇದೆ. ನಾಗ ಸಾಧುಗಳು ನರಮಾಂಸದಂತಹ ಊಟದೊಂದಿಗೆ ತಮ್ಮ ಕೆಲವು ಆಚರಣೆಗಳನ್ನು ತೋರುತ್ತಾರೆ ಎಂಬುದು ಕಂಡು ಬರುತ್ತದೆ.

**ನಾಗ ಸಾಧುಗಳ ದೀಕ್ಷೆ ಪದ್ಧತಿ**

ಸಾಧುಗಳಿಗೆ ದೀಕ್ಷೆ ಕೊಡುವ ವ್ಯವಸ್ಥೆ ಬಹಳ ಕಠಿಣವಾದುದು. ನಾಗಸಾಧು ಆಗುವುದು ಮೊದಲು ಗುರುವಿಗೆ ಶರಣಾಗಿ 4–5 ವರ್ಷಗಳ ಕಾಲ ಬ್ರಹ್ಮಚರ್ಯೆ ಪದ್ಧತಿಯನ್ನು ಅನುಸರಿಸಬೇಕು. ಈ ವ್ಯವಸ್ಥೆಯಲ್ಲಿ ಗುರುವು ಶಿಷ್ಯನಿಗೆ ಅನೇಕ ಪರೀಕ್ಷೆಗಳನ್ನು ಮಾಡುತ್ತಾರೆ. ಮೊದಲು ಐವರು ಗುರುಗಳು ಶಿಷ್ಯರಿಗೆ ಬ್ರಹ್ಮಚರ್ಯೆ ದೀಕ್ಷೆಯನ್ನು ಹೇಳುತ್ತಾರೆ. ಒಬ್ಬ ಗುರು ವಸ್ತ್ರ ಮತ್ತು ಮಂತ್ರ, ಧ್ವನಿ, ವಿಭೂತಿ, ಆಚಾರ, ತಂತ್ರ, ಹೀಗೆ ವಿದ್ಯೆಗಳನ್ನು ಕಲಿಸಿ 4–5 ವರ್ಷಗಳ ಕಾಲ ಸ್ವಯಂಸೇವಕನಾಗಿ ಯಾರಲ್ಲಿಯೂ ಭಿಕ್ಷೆ ಬೇಡದೇ ತನ್ನ ಕಾರ್ಯಗಳನ್ನು ತಾನೇ ನಿರ್ವಹಿಸುತ್ತಾ 4 ರಿಂದ 5 ವರ್ಷಗಳ ಕಾಲ ಕಳೆಯಬೇಕು. ಇದು ಗುರುವಿನ ಆಶ್ರಮದಲ್ಲಾದರೂ ಸರಿ ಅಥವಾ ದೇಶ ಸಂಚಾರಕ್ಕಾಗಿ ಕೂಡ ಹೋಗಬಹುದು. ನಂತರ ಬಂದ ಮೇಲೆ ಗುರುವು ಶಿಷ್ಯನನ್ನು ಪರೀಕ್ಷಿಸಲಾಗುತ್ತದೆ. ಶಿಷ್ಯನ ಬೆನ್ನು ಮೂಳೆ ಬಿಲ್ಲಿನಂತಿರಬೇಕು. ಕಣ್ಣಿನಲ್ಲಿ ತೇಜಸ್ಸು ಹಾಗೂ ಕೆಲ ಉಪಚಾರಗಳಲ್ಲಿ ಅವನ ವರ್ತನೆಗಳನ್ನು ನೋಡಿ ನಂತರ ಅವನಿಗೆ ದೀಕ್ಷೆಯನ್ನು ನೀಡಲಾಗುತ್ತದೆ. ಈ ದೀಕ್ಷೆಯು ಸಾಧುಗಳಲ್ಲಿ ನಾಮಕರಣ ಪದ್ಧತಿಯಂತೆ ದೀಕ್ಷೆ ನೀಡುತ್ತಾರೆ. ದೀಕ್ಷೆ ಕೊಟ್ಟ ಮೇಲೆ ಕುಂಭ ಮೇಳದಲ್ಲಿ ಶಿಷ್ಯನ ಲಿಂಗಚ್ಛೇದವನ್ನು ಮಾಡಲಾಗುತ್ತದೆ. ಆಗ ಸಂಪೂರ್ಣ ಸಾಧು ಆಗುವನು. ಸರ್ವಸಂಗ ಪರಿತ್ಯಾಗಿಯಾಗಿ ನಾಗಸಾಧುಗಳಾಗಿ ತಮ್ಮ ನಿತ್ಯದ ಬದುಕಿನ ಶ್ರೇಷ್ಠತೆಗೆ ಸಾಮಾಜಿಕ ಗೌರವಗಳೊಂದಿಗೆ ಬದುಕಿನ ಎಲ್ಲಾ ಸಮತೋಲನಗಳನ್ನು ಕಾಪಾಡಿಕೊಂಡು ಬದುಕುವಂತೆ ಗುರುವು ಆಶೀರ್ವದಿಸುತ್ತಾನೆ.

**ಸಂಸಾರಿಗಳಿಗೂ ದೀಕ್ಷೆ ಕೊಡುವ ಪದ್ಧತಿ**

ನಾಗ ಸಾಧುಗಳಲ್ಲಿ ಬ್ರಹ್ಮಚಾರರಿಗಳಿಗೆ ಮಾತ್ರವಲ್ಲದೇ ಸಂಸಾರಸ್ಥರಿಗೂ ಕೂಡ ದೀಕ್ಷೆ ಕೊಡುವ ಪದ್ಧತಿ ಕಂಡು ಬರುತ್ತದೆ. "ಏಕ ನಾರಿ ಸದಾ ಬ್ರಹ್ಮಚಾರಿ" ಎಂಬ ಸಾಧುಗಳ ನುಡಿಯಂತೆ ಒಬ್ಬಳೇ ಪತ್ನಿಯನ್ನು ಹೊಂದಿದವರಿಗೆ ಸಾಧುಗಳು ದೀಕ್ಷೆ ಕೊಡುವ ಪದ್ಧತಿ ಇವತ್ತಿಗೂ ನಾಗಸಾಧುಗಳಲ್ಲಿ ಮುಂದುವರೆದಿದೆ. ಗಿರಿ, ಪುರಿ, ಭಾರತಿ, ಸರಸ್ವತಿ ಎಂಬ ಪಂಥಗಳಿದ್ದು ಈ ಸನ್ನಿದಾನಗಳಲ್ಲಿ ದೀಕ್ಷೆಯನ್ನು ನೀಡಲಾಗುತ್ತದೆ.

**ಸಾಧುಗಳ ಪೂಜಾ ಕ್ರಮ**

ನಾಗ ಸಾಧುಗಳು ಗುರು ದತ್ತಾತ್ರೇಯ ಹಾಗೂ ನಾಗ ಸಂತತಿ ಶಿವನ ಹರಿಕಾರರಾಗಿದ್ದಾರೆ. ಕಾಲಭೈರವನನ್ನು ಈ ಪಂಥವು ಹೆಚ್ಚಾಗಿ ಆರಾಧನೆ ಮಾಡುವುದು ಕಂಡು ಬರುತ್ತದೆ. ಪ್ರತಿನಿತ್ಯವು ಬ್ರಾಹ್ಮೀ ಮುಹೂರ್ತದಲ್ಲಿ ಬೆಳಗಿನ ಜಾವ 3 ಗಂಟೆಗೆ ಮಡಿಯಿಂದ ಪೂಜೆ, ಮಂತ್ರ ಪಠನೆಗಳು ನಡೆಯುತ್ತವೆ. ಇದರಲ್ಲಿ ಶಿಷ್ಯನಾದವನು ಗುರುವಿಗೆ ಪುಷ್ಪವನ್ನು ಕೊಡುವುದು ಹಾಗೂ ಪೂಜಾ ಕಾರ್ಯಕ್ರಮಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಒದಗಿಸುವ ಕೆಲಸ ಶಿಷ್ಯನದಾಗಿರುತ್ತದೆ. ಬೆಳಗಿನ ಜಾವ 3 ರಿಂದ ಬೆಳಿಗ್ಗೆ 10 ಗಂಟೆಯವರೆಗೆ ಸಾಧುಗಳು ಪೂಜೆಗಳಲ್ಲಿ ತಲ್ಲೀನರಾಗಿರುತ್ತಾರೆ. ನಂತರವೇ ಉಪಹಾರ ಮತ್ತು ಪಾನೀಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಗುರುವು ಸೇವಿಸಿದ ನಂತರ ಶಿಷ್ಯನಾದವನು ಸೇವಿಸಬೇಕು ಎಂಬ ಪದ್ಧತಿ ಸಾಧುಗಳ ಆಚರಣೆಯಲ್ಲಿ ಕಂಡು ಬರುತ್ತದೆ.

**ಕುಂಭಮೇಳದಲ್ಲಿ ಶಿಷ್ಯರ ದೀಕ್ಷೆ ಮತ್ತು ಪರೀಕ್ಷೆ**

ಕುಂಭ ಮೇಳವನ್ನು ನಾಗ ಸಾಧುಗಳು ದೀಕ್ಷೆ ಕೊಟ್ಟ ಶಿಷ್ಯರನ್ನು ಪರೀಕ್ಷಿಸುವ ವೇದಿಕೆ ಎಂಬುದಾಗಿ ಭಾವಿಸುತ್ತಾರೆ. ಅರ್ಧ ಕುಂಭಮೇಳ ಅಥವಾ ಪೂರ್ಣ ಕುಂಭಮೇಳದಲ್ಲಿ ಎಲ್ಲಾ ಸಾಧು ಸಂತರು ಒಗ್ಗೂಡುವ ಪದ್ಧತಿ ಕಂಡುಬರುತ್ತದೆ. ಇಲ್ಲಿ ದೀಕ್ಷೆ ಕೊಟ್ಟು ಜಯಿಸಿದಂತಹ ಶಿಷ್ಯರನ್ನು ಗುರುವು ಪರೀಕ್ಷಿಸುತ್ತಾರೆ.

**ನಾಗ ಸಾಧುಗಳ ಬದುಕು**

ನಾಗ ಸಾಧುಗಳು ಬದುಕು ಒಂದು ವಿಚಿತ್ರ ಮತ್ತು ನಿಗೂಢವಾದ ಆಚರಣೆಯಿಂದ ಕೂಡಿದೆ ಎಂದು ತಿಳಿಯುತ್ತದೆ. ಈ ಸಮುದಾಯದ ಸಾಧುಗಳು ಹುಟ್ಟಿಕೊಂಡಿದ್ದು, ಸಾಧುಗಳ ವಿಚಾರದಿಂದ ತಿಳಿದಂತೆ 8ನೇ ಶತಮಾನದಿಂದ ಈ ಸಾಧುಗಳು ಬೆಳೆದು ಬಂದ ದಾರಿಯನ್ನು ನೋಡಬಹುದು. ಅನ್ಯಾಯ ಮತ್ತು ಅಧರ್ಮವನ್ನು ಅಳಿಸಲು ಶಂಕರಾಚಾರ್ಯರು ಇವರನ್ನು ಸೃಷ್ಟಿಸಿದನು ಎಂದು ಕರೆಯುತ್ತಾರೆ. ಇವರು ಶಾಸ್ತ್ರ ಮತ್ತು ಶಸ್ತ್ರವನ್ನು ಬಲ್ಲವರಾಗಿದ್ದಾರೆ. ಇವರು ಹೆಚ್ಚಾಗಿ ಶಿವನ ದೇವಾಲಯದ ಮತ್ತು ಅತಿಯಾಗಿ ನೀರು ಹರಿಯುವ ಜಾಗದ ಸ್ಥಳದಲ್ಲಿ ವಾಸವಾಗಿರುತ್ತಾರೆ. ಶಿವನ ದೇವಾಲಯದ ಆವರಣದ ಮುಂದೆ ಈ ಸಾಧುಗಳು ಹೆಚ್ಚಾಗಿ ಕಂಡು ಬರುತ್ತಾರೆ. ಕುಂಭಮೇಳದಂತಹ ಕಾರ್ಯಕ್ರಮದಲ್ಲಿ ನಾಗಸಾಧುಗಳೇ ಹೆಚ್ಚಾಗಿ ಕಂಡು ಬರುತ್ತಾರೆ. 12 ವರ್ಷದ ಕುಂಭಮೇಳ ಅಥವಾ ಅರ್ಧ ಕುಂಭಮೇಳ 6 ವರ್ಷ ಈ ಸಮಯದಲ್ಲಿ ಮದವೇರಿದ ಆನೆಗಳಂತೆ ಹಿಂಡು ಹಿಂಡುವಾಗಿ ಬರುತ್ತಾರೆ. ಇವರ ಹತ್ತಿರ ಯಾವಾಗಲೂ ಒಂದು ಹೆಣವನ್ನು ಸುಟ್ಟ ಬೂದಿ ಮತ್ತು ಕೈಯಲ್ಲಿ ಒಂದು ತ್ರಿಶೂಲ ಮತ್ತು ಆಯುಧವನ್ನು ಹೊಂದಿರುತ್ತಾರೆ. ಹಾಗೂ ಯಾವಾಗಲೂ ನಗ್ನ ರೂಪದಿಂದ ಕೂಡಿರುತ್ತಾರೆ. ಇವರಲ್ಲಿ ಅಜ್ಞಾನಿಗೆ ಯಾವಾಗಲೂ ದೇಹಸ್ಫೂರ್ತಿ ಇರುತ್ತದೆ. ಸ್ವರೂಪಸ್ಫೂರ್ತಿ ಇರುವುದಿಲ್ಲ. ಹಾಗೂ ಜ್ಞಾನಿ ಪುರುಷರಿಗೆ ದೇಹಸ್ಫೂರ್ತಿ ಇರುವುದಿಲ್ಲ. ಆದರೆ ಸ್ವರೂಪ ಸ್ಫೂರ್ತಿ ಮಾತ್ರ ಯಾವಾಗಲೂ ಇರುತ್ತದೆ ಎಂಬ ನಂಬಿಕೆ ಈ ಸಾಧುಗಳಲ್ಲಿ ಕಂಡು ಬರುತ್ತದೆ. ಈ ವ್ಯವಸ್ಥೆಯಿಂದ ಹೊರ ಬಂದರೆ ಮಾತ್ರ ಸಾಧುಗಳು ಅಪ್ಪಣೆಯನ್ನು ನೀಡುತ್ತಾರೆ. ಅಘೋರಿ ಅಥವಾ ಈ ನಾಗ ಸಾಧುಗಳು ಆಗಲು ಯಾರು ಕೂಡ ಉತ್ತೇಜಿಸುವುದಿಲ್ಲ. ಅವರೇ ಸ್ವಯಂ ಇಚ್ಛೆಯಿಂದ ಬರಬೇಕು ಎಂಬ ಅಭಿಪ್ರಾಯ ಹೊಂದಿದ್ದಾರೆ. ಭಾರತದಲ್ಲಿ ಸಾಧುಗಳಿಗೆ ತರಬೇತಿ ನೀಡಲು ಒಟ್ಟು 14 ಅಖಾಡಗಳು ಇವೆ. ಅವುಗಳಲ್ಲಿ 7 ಮಾತ್ರ ತರಬೇತಿಯನ್ನು ನೀಡುತ್ತವೆ. ಈ ತರಬೇತಿಯಲ್ಲಿ ಅತ್ಯಂತ ಕಠಿಣವಾದ ತಪಸ್ಸು ಮಾಡಬೇಕು. ಈ ತರಬೇತಿ 6 ತಿಂಗಳಿಂದ 12 ವರ್ಷಗಳ ಕಾಲ ತರಬೇತಿ ನಡೆಯುತ್ತದೆ ಮತ್ತು ಈ ಸಾಧುಗಳು ಶಿವನನ್ನು ಬಿಟ್ಟರೆ ಬೇರೆಯ ಯಾವ ದೇವರನ್ನು ಪೂಜಿಸುವುದಿಲ್ಲ. ಶಿವನೇ ಇವರಿಗೆ ಉಸಿರು ಎಂದು ಕರೆಯುತ್ತಾರೆ. ತರಬೇತಿಯು ಮುಗಿದ ನಂತರ ಗಂಗಾನದಿಯಲ್ಲಿ 108 ಬಾರಿ ಮಡಿಯನ್ನು ಮಾಡಿಕೊಳ್ಳಲಾಗುತ್ತದೆ. ಮತ್ತು ಅನೇಕ ರೀತಿಯ ಶಿವ ಮಂತ್ರಗಳನ್ನು ಜಪಿಸಲಾಗುತ್ತದೆ. ನಂತರ ತಲೆಯ ಕೂದಲನ್ನು ಬೋಳಿಸಿಕೊಂಡು ನಗ್ನರೂಪದಿಂದ ಧ್ವಜಾದ ಕೆಳಗೆ 24 ಗಂಟೆಗಳ ಕಾಲ ಒಂಟಿ ಕಾಲಿನಿಂದ ತಪಸ್ಸು ಮಾಡಬೇಕು ಎಂಬ ಪ್ರತೀತಿಯಿದೆ. ನಂತರ ಗುರುವಿನಿಂದ ಆಶೀರ್ವಾದ ಪಡೆದು ತಪಸ್ಸು ಮಾಡಲು ಕಾಡಿಗೆ ತೆರಳುತ್ತಾರೆ ಮತ್ತು ಇವರು ಮಾಡುವ ಸ್ನಾನವನ್ನು ಶಾಕಿ (ಪವಿತ್ರ) ಎಂದು ಕರೆಯುತ್ತಾರೆ.

ಇವರು ಕುಂಭಮೇಳದಲ್ಲಿ ವಿಶೇಷವಾದ ಗೌರವ ಹೊಂದಿರುತ್ತಾರೆ ಎಂದು ತಿಳಿಯುತ್ತದೆ. ಇವರ ಎದುರು ಯಾವ ಒಬ್ಬ ಸಂಸಾರಿಯು ಬರುವಂತಿಲ್ಲ. ಇವರು ಕೊಟ್ಟರೆ ವರ ಮತ್ತು ಇಟ್ಟರೆ ಶಾಪ ಎಂಬ ಮನಸ್ಥಿತಿಯನ್ನು ಹೊಂದಿರುತ್ತಾರೆ. ಇವರಿಗೆ ದಿಕ್ಕುಗಳ ಅಂಬಾರ ಮತ್ತು ಸುಡುಗಾಡಿನ ಬೂದಿಯ ಬಂಗಾರ ಎಂದು ಕರೆಯುವ ಮನೋಧರ್ಮ ಹೊಂದಿದ್ದರೆ ಯಾವಾಗಲೂ ಉದ್ದನೆಯ ಜಾಟೆಯಿಂದ ಕೊರಳಲ್ಲಿ ಮುತ್ತಿನ ರುದ್ರಾಕ್ಷಿ ಮತ್ತು ಲಿಂಗದ ಮತ್ತು ಏಕರೂಪದ ತಿಲಕವನ್ನು ಹೊಂದಿರುತ್ತಾರೆ. ಮೈತುಂಬಾ ಸ್ಮಶಾನದ ಬೂದಿಯನ್ನು ಬಳಿದುಕೊಂಡು ನಗ್ನ ಸ್ಥಿತಿಯಲ್ಲಿ ಗಾಂಜ ಹಿಡಿದು ಸೇವನೆಯಲ್ಲಿ ತೇಲುತ್ತಿರುತ್ತಾರೆ. ಗಾಂಜ ಇವರ ಪಾಲಿಗೆ ಶಿವಪ್ರಸಾದ ಎಂದು ಹೇಳುತ್ತಾರೆ. ಇದು ಶಿವನ ಹತ್ತಿರ ಅನುಸಂಧಾನ ಮಾಡಿಸುತ್ತದೆ ಎಂದು ಕರೆಯುತ್ತಾರೆ. ಮತ್ತು ಇವರ ಪ್ರತಿಯೊಂದು ಸಂಪ್ರದಾಯವು ಹೃದಯದ ಬಡಿತವನ್ನು ಹೆಚ್ಚಿಸುತ್ತದೆ. ನಗ್ನರೂಪದಲ್ಲಿ ನೆಲದ ಮೇಲೆ ಮಲಗಬೇಕು ಮತ್ತು ಪ್ರತಿ ದಿನಕ್ಕೆ 7 ಮನೆಯಿಂದ ಮಾತ್ರ ಭಿಕ್ಷೆಯನ್ನು ಬೇಡಬೇಕು. ಭಿಕ್ಷೆಯು 7 ಮನೆಯಿಂದ ಸಿಗದೇ ಹೋದರೆ ಆ ದಿನ ಉಪವಾಸದಿಂದ ಕೂಡಿರಬೇಕು. ಬೇರೆ ಯಾವ ರೀತಿಯಿಂದಲೂ ಭಿಕ್ಷೆಯ ಕಾಯಕ್ಕೆ ಹೋಗುವಂತಿಲ್ಲ. ಇವರು ಸಾಧು ಸನ್ಯಾಸಿ ಗುರುವಿನ ಸ್ಥಾನ ಪಡೆದವರಿಗೆ ಮಾತ್ರ ನಮಸ್ಕರಿಸಬೇಕು ಎಂಬ ನಿಯಮ ಹೊಂದಿದ್ದಾರೆ. ವಿಚಿತ್ರವಾದ ಶಿವಭಕ್ತರಾಗಿರುತ್ತಾರೆ. ಅವರ ದೇಹದ ಅಲಂಕಾರ ಎಲ್ಲಾ ಶಿವ ಅಲಂಕಾರ ಎಂದು ಕರೆಯುತ್ತಾರೆ. ಇವರು ಹಲವು ಅಮವಾಸೆ, ಹುಣ್ಣಿಮೆ ಆಚರಣೆಗಳು, ಸಂಸ್ಕೃತಿ ನಿಯಮಬದ್ಧ ಸಂಪ್ರದಾಯಗಳು ಎಂದು ಭಾವಿಸುತ್ತಾರೆ. ಎಂಥ ಧೈರ್ಯವಂತರನ್ನು ಬೆಚ್ಚಿಸುವಂತೆ ನಡೆಯುತ್ತವೆ. ಇವರು ಅಮವಾಸೆಯಲ್ಲಿ ಸುಡುಗಾಡಿನಲ್ಲಿ ಪ್ರವೇಶ ಮಾಡುತ್ತಾರೆ ಮತ್ತು ಸ್ಮಶಾನವೇ ಇವರಿಗೆ ಪವಿತ್ರವಾದ ಜಾಗೃತ ಸ್ಥಳ ಎಂದು ಕರೆಯಲಾಗುತ್ತದೆ. ಕೆಲ ನಾಗ ಸಾಧುಗಳು ಸಸ್ಯಹಾರಿಗಳಾದರೆ ಇನ್ನು ಕೆಲವರು ಮಾಂಸಹಾರಿಗಳು ಆಗಿದಾರೆ. ಇವರು ಶವವನ್ನು ತಿನ್ನುತ್ತಾರೆ ಮತ್ತು ಇನ್ನು ಕೆಲವರು ಸುಡುತ್ತಿರುವಾಗಲೆ ಶವವನ್ನು ಎಳೆದು ತಿನ್ನುತ್ತಾರೆ ಮತ್ತು ಕಾದ ಮಣ್ಣಿನಿಂದ ಕೆಂಡ ಎಳೆದು ಅದರ ಮೇಲೆ ಕುಳಿತು ತಪಸ್ಸು ಧ್ಯಾನ ಮಾಡುತ್ತಾರೆ ಮತ್ತು ಶವದ ಜೊತೆಯೇ ಸಂಭೋಗ ಕೂಡ ನಡೆಸುತ್ತಾರೆ. ಮತ್ತು ಸಂಭೋಗಿಸಿದ ಶವವನ್ನು ಪೂಜಿಸುತ್ತಾರೆ. ಅದೇ ರೀತಿಯಿಂದ ಮಂತ್ರ ಜಪಿಸುತ್ತ ಕೂಗುತ್ತ ನೃತ್ಯವನ್ನು ಮಾಡಲಗುತ್ತದೆ. ಇವರ ಬಳಿ ಒಂದು "ಕಾಪಲ" (ಅಸ್ಥಿಪಂಜರದ ತಲೆ ಬುರುಡೆ) ಎಂದು ಕರೆಯುವ ಪ್ರತಿಯ ಆಕೃತಿಯಿಂದ ಕೂಡಿದ ವಸ್ತು ಹೊಂದಿರುತ್ತಾರೆ. ಇದಕ್ಕೆ "ಕಾಪಲ" ಎಂದು ಕರೆಯುತ್ತಾರೆ. ಇದರಲ್ಲಿ ಆಹಾರ ಮತ್ತು ಮಧ್ಯ ಸೇವನೆಗೆ ಇಟ್ಟುಕೊಂಡಿರುತ್ತಾರೆ. ಇದು ಅವರಿಗೆ ಪವಿತ್ರವಾದ ವಸ್ತು ಎಂದು ಭಾವಿಸುತ್ತಾರೆ. ಮೈ ತುಂಬ ಮೇಲೆ ಹೇಳಿರುವ ಹಾಗೆ ಕುಂದ್ರಯ ಪತ್ರಿಯ ಕಾಯಿ ಮತ್ತು ಇಂಗ್ಲಾರದ ಕಾಯಿ. ಈ ಕಾಯನ್ನು ಸುಡುಗಾಡುಸಿದ್ಧರು ತಮ್ಮ ಗಿಡಮೂಲಿಕೆ ವಸ್ತು ಔಷಧಿಗೆ ಬಳಸುತ್ತಾರೆ. ಹಾಗೆ ಮೈತುಂಬ ಬೂದಿಯಿಂದ ಬಳಿದುಕೊಂಡಿರುತ್ತಾರೆ. ಯಾರಾದರೂ ಇವರ ಬಳಿ ಭಕ್ತರು ಬಂದರೆ ಮೊದಲು ಭಸ್ಮವನ್ನು ಹಚ್ಚುತ್ತಾರೆ ಮತ್ತು ಅಗ್ನಿಯನ್ನು ಹೆಚ್ಚಾಗಿ ಪೂಜಿಸುತ್ತಾರೆ. ಸ್ಮಶಾನದ ಮಧ್ಯೆ ಕುಳಿತು ತಲೆಯ ಮೇಲೆ ಒಂದು ಬಿಂದಿಗೆಯಲ್ಲಿ ಬೆಂಕಿಯನ್ನು ಹಚ್ಚಿಕೊಂಡು ಬೆಂಕಿ ಭಸ್ಮವಾಗುವವರೆಗೂ ಶಿವ ಏಕರೂಪದ ಪದ್ಮಾಸನದಿಂದ ಕುಳಿತು ಧ್ಯಾನ ತಪಸ್ಸು ಮಾಡಿಕೊಂಡು ಬರುತ್ತಾರೆ. ಹೀಗೆ ಅನೇಕ ವಿಚಿತ್ರ ವಿಕೃತವಾದ ಆಚರಣೆಗಳು ನಾಗ ಸಾಧು ಅಥವಾ ಅಘೋರಿ ಎಂದು ಕರೆಯುವ ಈ ಶಿವಭಕ್ತರಲ್ಲಿ ಕಂಡು ಬರುತ್ತದೆ.

ಪುರುಷರು ಮಾತ್ರವಲ್ಲದೆ ಮಹಿಳೆಯರಲ್ಲಿಯೂ ಕೂಟ ನಾಗ ಸಾಧುಗಳು ಕಂಡು ಬರುತ್ತಾರೆ. ಇವರು ಕೂಡ ಪುರುಷರಂತೆ ದೀಕ್ಷೆಯನ್ನು ಪಡೆಯುತ್ತಾರೆ. ಇವರನ್ನು ಸಾಧುಗಳ ಮಾತೆ ಎಂದು ಕರೆಯುತ್ತಾರೆ. ದೀಕ್ಷೆಯ ನಂತರ ಅವರು ಪುರುಷ ಅಥವಾ ಮಹಿಳಾ ಸಾಧುಗಳು ಗಂಗಾ ನದಿಯಲ್ಲಿ ಪಿಂಡ ಪ್ರಧಾನ ಮಾಡಬೇಕು. ಅವರ ಅಂತ್ಯಸಂಸ್ಕಾರ ಅವರು ಬದುಕಿರುವಾಗಲೇ ನಡೆಯುತ್ತದೆ. ಇವರು ಮರಣ ಹೊಂದಿದ ನಂತರ ಇವರ ಶವ ಸಂಸ್ಕಾರವನ್ನು ಯಾರು ವಿಧಿಬದ್ಧವಾಗಿ ಸಂಪ್ರದಾಯದಿಂದ ನಡೆಯುವುದಿಲ್ಲ. ಆ ಶವವನ್ನು ಕಾಡು ಅಥವಾ ಹರಿಯುವ ನದಿ ಸಮುದ್ರಗಳಿಗೆ ಬಿಟ್ಟು ಬಿಡುತ್ತಾರೆ. ಅವರು ಎಲ್ಲವನ್ನು ಬಿಟ್ಟು ಯಾವ ವಸ್ತು ಮತ್ತು ಭೋಗವನ್ನು ಹೊಂದದೆ ಸರ್ವತ್ಯಾಗಿಗಳಾಗಿರುತ್ತಾರೆ. ಅವರ ದೀಕ್ಷೆಯಲ್ಲಿ ಅವರ ಪಿಂಡದಾನ ಮಾಡಿರುವುದರಿಂದ ಜೀವಿಗಳು ತಿಂದುಕೊಂಡು ಬದುಕುತ್ತವೆ ಎಂದು ಬಿಟ್ಟು ಬಿಡುತ್ತಾರೆ. ಹೀಗೆ ಅನೇಕ ವಿಚಿತ್ರವಾದ ಸಂಪ್ರದಾಯಗಳು ಕಂಡು ಬರುತ್ತವೆ. ಭಾರತದಲ್ಲಿ ಅನೇಕ ಪದ್ಧತಿಗಳು ಹೊಂದಿದ ಶಿವನ ಸಕಲ ವೈಭವ ಅಧಿಕಾರ ಹೊಂದಿದ್ದಾನೆ. ಕಾಲಭೈರವನನ್ನು ಆರಾಧಿಸುವುದು ಕಂಡು ಬರುತ್ತದೆ. ಭಾರತದ ವಾರಣಾಸಿ, ಹಿಮಾಚಲ, ದ್ವಾರಕನಾಥ, ಪುರಿ, ಕೇದಾರನಾಥ, ಉತ್ತರ ಭಾರತದ ಅಖಾಡ ಶಿವ ದೇವಾಲಯದಲ್ಲಿ ಈ ಸಾಧು ಸನ್ಯಾಸಿಗಳ ತಾಣವಾಗಿದೆ. ಹಾಗೂ ಮಾತೆಯವರು ಕೂಡ ಇರುವ ಸ್ಥಳ ಇದಾಗಿದೆ.

**ಉಪಸಂಹಾರ**

ಮೇಲ್ಕಂಡ ಎಲ್ಲಾ ವಿಷಯದ ಅನ್ವಯವನ್ನು ಅವಲೋಕಿಸಿದಾಗ ಪ್ರತಿಯೊಂದು ಆಚರಣೆ ಮತ್ತು ಪದ್ಧತಿಗಳು ಅವರ ಭೌತಿಕ ಮಟ್ಟದ ಸಾಧನೆಯನ್ನು ಅರಿಯುತ್ತದೆ ಎಂದು ಹೇಳಬಹುದು. ಸಂತರು, ಸಾಧಕರು, ಯೋಗಿಗಳು ಬದುಕನ್ನು ವಿಮರ್ಶಿಸಿದಾಗ ಅವರ ವಿಚಾರಧಾರೆಗಳು ಒಂದೊಂದು ಪಂಥಗಳ ತಳಹದಿಯ ಮೇಲೆ ಕಟ್ಟಲಾಗಿದೆ ಎಂದು ಹೇಳಬಹುದು. ಅದರಂತೆ ಇಡೀ ನಾಗಸಾಧುಗಳ ಜೀವನ ದಾರಿಯು ಧಾರ್ಮಿಕದ ತಳಹದಿಯ ವೈಶಿಷ್ಟ್ಯತೆಯನ್ನು ಮೆರೆಯುತ್ತದೆ ಹಾಗೂ ಸಾಧಿಸುವ ಛಲ, ದೇಶಾಭಿಮಾನ, ಪ್ರಕೃತಿಯ ಮಡಿಲಿನ ಮಮಕಾರವನ್ನು ತೋರುತ್ತದೆ ಎಂದು ಕಂಡು ಬರುತ್ತದೆ.

ವರ್ತಮಾನದಲ್ಲಿ ಇಂತಹ ಅಧ್ಯಯನಗಳು ಹೆಚ್ಚಾಗಿ ಆಗಬೇಕಾಗಿದ್ದು, ಇವರಲ್ಲಿರುವ ಸಿದ್ಧಾಂತಗಳನ್ನು ಅರಿಯಲು ಹಾಗೂ ಈ ಸಾಧುಗಳ ಬಗ್ಗೆ ಇವತ್ತಿಗೂ ಯಾವ ಮೂಲದ ಆಚರಣೆಯ ಹರಿಕಾರರು ಎಂಬುದಾಗಿ ಸ್ಪಷ್ಟತೆ ತಿಳಿಯದೇ ಮುಚ್ಚಿಹೋಗಿದೆ. ಆದಕಾರಣ ಇಂತಹ ಅಧ್ಯಯನಗಳು ಹೆಚ್ಚಾದಂತೆ ಸಮಾಜದ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಧರ್ಮಗಳ ವ್ಯವಸ್ಥೆಯ ತಳಹದಿಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾನವನಲ್ಲಿರುವ ಮನೋವೈಜ್ಞಾನಿಕ ಸಂಗತಿಗಳು ಹಾಗೂ ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮಗಳ ಅಗೋಚರ ವಿಸ್ಮಯಗಳ ಶಕ್ತಿಯನ್ನು ಅರಿಯಲು ಸಾಧ್ಯವಾಗುತ್ತದೆ ಎಂದು ಭಾವಿಸಬಹುದು. ಒಟ್ಟಾರೆಯಾಗಿ ಸಾಧುಗಳ ಧೋರಣೆಯು ತ್ಯಾಗ ಹಾಗೂ ನಿರಾಕಾರ ಭಾವನೆಗಳ ಸಂದೇಶವಾಗಿದ್ದು, ಆದರೆ ಇಂತಹ ಪದ್ಧತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾಣದ ಶಕ್ತಿಯ ಹುಡುಕಾಟದಲ್ಲಿ ನಿರತರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಕೃಷ್ಣಮೂರ್ತಿ ಮ.ಸು. (2010). ಸಿದ್ದ ಸಾಹಿತ್ಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕಾಳಾಮುಖ ಮತ್ತು ಪಾಶುಪತಿ ದೇವಾಲಯಗಳು. (2007). ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಅಯ್ಯರ್ ವಿ.ಕೆ. (2010). ಹಿಂದೂ ಶಾಸ್ತ್ರಗಳು ಮತ್ತು ಸಂಸ್ಕಾರಗಳು. ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು.
- ಮೇತ್ರಿ ಕೆ.ಎಂ. (2012). ಮರುಗು ಭಾಷೆ. ಪು.ಸಂ.64. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮೋಹನ್ ಎಸ್. ದೊಡ್ಡಮನಿ. (2011). ಮೂರುಜಾವಿ ದೇವರ ಪರಂಪರೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕುಮಾರ್ ಜೆ. (2012). ನೂರೊಂದು ವಿರಕ್ತರು ಮತ್ತು ಹಂಪಿ ಪರಿಸರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮೋಹನ್ ಎಸ್. (2010). ನಾಗಾರಾಧನೆ ಪರಂಪರೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಹಮತ್ ತರಿಕೇರಿ. (2013). ಕರ್ನಾಟಕ ನಾಥ ಪಂಥ. ಅಭಿನವ ಪ್ರಕಾಶಕನ. ಬೆಂಗಳೂರು. ಪು.ಸಂ. 15 ಮತ್ತು 115.
- ಶಾರದ ಮುಳ್ಳೂರು. (2010). ಆರೋಢ ಪರಂಪರೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗಂಟಿ ಎಮ್.ಎಸ್. (2008). ಸುಡುಗಾಡು ಸಿದ್ಧರು. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.


**ಸಂದರ್ಶನ**

- ಹಂಪಿಗೆ ಭೇಟಿ ನೀಡಿದ ನಾಗ ಸಾಧುಗಳಿಂದ ಸಂಗ್ರಹಿಸಿದ ಮಾಹಿತಿ